ದಿನಾಂಕಃ 08.11.2022

ಓ.ಎಸ್ ಃ 58/2019

ಪಿ ಡಬ್ಲ್ಯೂ ಃ **2**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಆರ್. ರವರಿಂದ ಃ**

ನನಗೆ ಕನ್ನಡ ಓದಲು ಬರುವುದಿಲ್ಲ ಆದರೆ ಮಾತನಾಡುತ್ತೇನೆ. ನಾನು ದ್ವಿತೀಯ ಪಿಯುಸಿ ರವರೆಗೂ ಓದಿದ್ದೇನೆ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದು ರಿಯಲ್ ಎಸ್ಟೇಟ್ ಮತ್ತು ಕಟ್ಟಡ ನಿರ್ಮಾಣ ಕೆಲಸ ಮಾಡುತ್ತೇನೆ. ವಾದಿ ಹೇಗೆ ಪರಿಚಯ ಎಂದರೆ ಕೊಪ್ಪ ಸರ್ಕಲ್ ಬಳಿ ಇರುವ ಹೋಟೆಲ್ ಗೆ ಬರುತ್ತಿದ್ದರು ಪುಟ್ಟರಾಮು ರವರ ಮೂಲಕ ಪರಿಚಯ. ನಾನು ಮತ್ತು ಸೂರ್ಯಪ್ರಕಾಶ್ ರವರು ಸುಮಾರು 20 ವರ್ಷದಿಂದ ಪರಿಚಯ. ನಾವಿಬ್ಬರು ಒಂದೇ ಕಡೆ ವಾಸವಾಗಿರುತ್ತೇವೆ. ಬೆಂಗಳೂರಿನ ಲಕ್ಷ್ಮಣ ಎನ್ನುವವರಿಗೆ ಮದ್ದೂರಿನಲ್ಲಿರುವ ಒಂದು ಜಮೀನು ಕೊಡಿಸಿದ್ದು ಅದು ಎಲ್ಲಿದೆ ಎಂದು ಈಗ ಮರೆತು ಹೋಗಿದೆ. ದಾವಾ ಆಸ್ತಿಯ ಸರ್ವೆ ನಂಬರ್ ಚೆಕ್ ಬಂದಿ ಗೊತ್ತಿರುತ್ತದೆ. ಸರ್ವೆ ನಂಃ 374/2, ಚೆಕ್ ಬಂದಿ ಗೊತ್ತಿರುವುದಿಲ್ಲ. ಪ್ರತಿವಾದಿಗಳ ಹೆಸರಿನಲ್ಲಿರುವ ದಾಖಲೆಗಳನ್ನು ನೋಡಿರುತ್ತೇನಾ ಎಂದರೆ ನೋಡಿರುವುದಿಲ್ಲ. ಪ್ರತಿವಾದಿಗಳಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ದಾಖಲೆಗಳನ್ನು ನೋಡದೇ ಕ್ರಯದ ಕರಾರು ಪತ್ರ ಮಾಡಿಸುತ್ತೆನಾ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ನೋಡಿ ಮಾಡುತ್ತೇವೆ ಎಂದು ನುಡಿಯುತ್ತಾರೆ. ಮಾತುಕತೆಯು ಜಮೀನಿನ ಬಳಿ ಆಗಿರುತ್ತದೆ. ಮಾತುಕತೆಯ ಸಮಯದಲ್ಲಿ ಪ್ರತಿವಾದಿಗಳನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಕ್ರಯ ಪತ್ರವನ್ನು ಪ್ರತಿವಾದಿಗಳೇ ಶ್ರೀನಿವಾಸ್ ವಕೀಲರ ಬಳಿ ಬರೆಸಿರುತ್ತಾರೆ ಎಲ್ಲಿ ತಯಾರು ಮಾಡಿದ್ದರು ಎಂದ ನನಗೆ ಗೊತ್ತಿರುವುದಿಲ್ಲ. ವಾದಿಯು ಪ್ರತಿವಾದಿಗಳಿಗೆ ತಾಲ್ಲೂಕು ಕಚೇರಿಯ ಬಳಿ ಇರುವ ಮೊದಲನೇ ಅಂಗಡಿಯ ಬಳಿ ಹಣವನ್ನು ಕೊಟ್ಟಿರುತ್ತಾರೆ. 500 ರೂ. ಮುಖ ಬೆಲೆ ಇರುವ 6 ಕಟ್ಟನ್ನು ವಾದಿಯು 1 ಮತ್ತು 2 ನೇ ಪ್ರತಿವಾದಿಗಳಿಗೆ ಕೊಟ್ಟಿರುತ್ತಾರೆ. ಹಣವನ್ನು ಕೊಡುವಾಗ ಊರಿನವರು ಯಾರು ಇರಲಿಲ್ಲ. ಕರಾರು ಪತ್ರ ನೊಂದಣಿ ಮಾಡಿಸಲಿಲ್ಲ. ಏಕೆಂದರೆ ಪೋಡಿ ಆಗಿರಲಿಲ್ಲ. ಕರಾರು ಪತ್ರವನ್ನು ತಯಾರು ಮಾಡುವಾಗ ನಾನು ಮತ್ತು ಸೂರ್ಯ ಪ್ರಕಾಶ್ ಹಾಜರಿದ್ದೇವಾ ಎಂದರೆ ಸಾಕ್ಷಿಯು ಪ್ರತಿವಾದಿಗಳೇ ತಯಾರು ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ನಾನು ಓದಿರುವುದಿಲ್ಲ ಸಹಿ

ಮಾತ್ರ ಮಾಡಿರುತ್ತೇನೆ. ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ. ನ್ಯಾಯಾಲಯದಲ್ಲಿ ಈ ದಿನ ಪ್ರತಿವಾದಿಗಳು ಹಾಜರಿರುತ್ತಾರ ಎಂದರೆ ಸಾಕ್ಷಿಯು ಹಾಜರಿರುವ ವ್ಯಕ್ತಿಗಳನ್ನು ನೋಡಿ ಪ್ರತಿವಾದಿಗಳು ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ಈ ಸಮಯದಲ್ಲಿ ನ್ಯಾಯಾಲಯದ ಆವರಣದಲ್ಲಿ 2 ನೇ ಪ್ರತಿವಾದಿ ಪ್ರತಾಪ್ ರವರು ಹಾಜರಿರುತ್ತಾರೆ.

2. ಕರಾರು ಪತ್ರಕ್ಕೆ 1 ನೇ ಪ್ರತಿವಾದಿಯು ಹೆಬ್ಬೆಟ್ಟಿನ ಗುರುತು ಹಾಕಿದ್ದು 2 ನೇಪ್ರತಿವಾದಿಯು ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತಾರೆ. ಪತ್ರವನ್ನು ಶ್ರೀನಿವಾಸ್ ತಾ. ಕಚೇರಿಯ ಬಳಿ ತಯಾರು ಮಾಡಿರುತ್ತಾರೆ. ನಾನು, ವಾದಿ ಮತ್ತು ಸೂರ್ಯ ಪ್ರಕಾಶ್ ರವರು ಈ ದಿನ ನ್ಯಾಯಾಲಯಕ್ಕೆ ಒಟ್ಟಿಗೆ ಕಾರಿನಲ್ಲಿ ಬಂದಿರುತ್ತೇವೆ ಎಂದರೆ ಸಾಕ್ಷಿಯ ನಾನು ಮತ್ತು ಸೂರ್ಯ ಪ್ರಕಾಶ್ ಬಸನಲ್ಲಿ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿ ಪರಿಚಯ ಇದ್ದು, ವಿಶ್ವಾಸದಿಂದ ಇರುತ್ತೇವೆ ಎಂದರೆ ಸಾಕ್ಷಿಯು ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಸೂರ್ಯ ಪ್ರಕಾಶ್ ರವರು ಯಾವುದೇ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಿಲ್ಲ ಮತ್ತು ಮದ್ದೂರಿನ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ ಮತ್ತು ಪ್ರತಿವಾದಿಗಳನ್ನು ನೋಡಿರುವುದಿಲ್ಲ ನಾನು, ವಾದಿ ಮತ್ತು ಸೂರ್ಯ ಪ್ರಕಾಶ್ ಮತ್ತು ಬಿಕ್ಲಂದಾರರು ಶ್ರೀನಿವಾಸ್ ಸೇರಿಕೊಂಡು ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗಳಿಗೆ 3 ಲಕ್ಷ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ಸೂರ್ಯ ಪ್ರಕಾಶ್ ಮತ್ತು ಬಿಕ್ಲಂದಾರರು ಶ್ರೀನಿವಾಸ್ ಸೇರಿಕೊಂಡು ನಿಪಿ 7 ಕ್ಕೆ ಪ್ರತಿವಾದಿಗಳ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.